# ಗಿಚ್ಚಿ ಗಿಲಿಗಿಲಿ ಅದೃಷ್ಟವನ್ನೇ ಬದಲಿಸಿತು

## ಅಮೃತ ಉಪ್ಪಾರ
### ಕಲರ್ಸ್ ಕನ್ನಡದ 'ಭಾಗ್ಯಲಕ್ಷ್ಮೀ'ಯ ಕನ್ನಿಕಾ



◆ **ಅಭಿನಯದ ಅಭಿರುಚಿ ಮೂಡಿದ್ದು ಹೇಗೆ?**

ತೀರ ಆಕಸ್ಮಿಕವಾಗಿ ಈ ರಂಗವನ್ನು ನೋಡಿದಂತೆ ಆಯಿತು. ಪತ್ರಿಕೋದ್ಯಮ ಓದುವ ಉದ್ದೇಶದಿಂದಲೇ ಬಳ್ಳಾರಿಯಿಂದ ಬೆಂಗಳೂರಿಗೆ ಬಂದೆ. ಇಲ್ಲಿ ಓದಿದ ನಂತರ ಮುದ್ರಣ ಮಾಧ್ಯಮದಲ್ಲಿ ಎರಡು ವರ್ಷ ಕೆಲಸ ಮಾಡಿ ಸ್ವಲ್ಪ ದಿನ ದೃಶ್ಯ ಮಾಧ್ಯಮದಲ್ಲೂ ಕೆಲಸ ಮಾಡಿದೆ. ಅಷ್ಟರಲ್ಲಿ 'ಸಿರಿಕನ್ನಡ' ಟೀವಿಯಲ್ಲಿ ನಿರೂಪಣೆಗೆ ಆಡಿಷನ್ ನೀಡಲು ಕರೆದರು. ಅದರಲ್ಲಿ ನನಗೆ ಆಸಕ್ತಿ ಇತ್ತು. ಮನರಂಜನೆಯ ಟೀವಿಯಲ್ಲಿ, ಅದರಲ್ಲೂ ರಿಯಾಲಿಟಿ ಶೋಗೆ ನಿರೂಪಣೆ ಮಾಡುವ ಅವಕಾಶ ಎಂದು ಆಸೆಯಿಂದಲೇ ಪ್ರಯತ್ನ ಮಾಡಿದೆ. ಅದರಲ್ಲಿ ಅವಕಾಶ ಸಿಕ್ಕಿತು. 'ಕಾಮಿಡಿ ಕ್ಲಬ್' ನಡೆಸಿಕೊಡುತ್ತಿದ್ದಂತೆ ಸಿನಿಮಾಗಳಿಗೆ ಆಡಿಷನ್ ಬರಲು ಆರಂಭವಾಯಿತು. ಸಿಕ್ಕ ಅವಕಾಶಗಳನ್ನು ಬಳಸುತ್ತಾ ಅಭಿನಯವನ್ನು ಕಲಿಯುತ್ತಿದ್ದೇನೆ.

◆ **ನೀವೂ ಒಮ್ಮೆ ಸಂದರ್ಶನ ನೀಡುತ್ತೀರಿ ಎಂದು ಎಂದಾದರು ಅನ್ನಿಸಿತ್ತಾ?**

ನನಗೆ ಇದ್ದ ಆಸೆ, ಒಮ್ಮೆ ತೆರೆಯಲ್ಲಿ ಕಾಣಿಸಿಕೊಳ್ಳಬೇಕು ಎನ್ನುವುದಕ್ಕೆ ಮಾತ್ರ ಸೀಮಿತವಾಗಿತ್ತು. ಒಂದು ಶೋ ಮಾಡ್ತೀನಿ ಎಂದೂ ಅಂದುಕೊಂಡಿರಲಿಲ್ಲ. ಅದರ ನಂತರ ಸೀರಿಯಲ್ ಮಾಡ್ತೀನಿ, ನನ್ನ ಹೆಸರಲ್ಲಿ ಫೇಸ್‌ಬುಕ್ ಫ್ಯಾನ್ ಪೇಜ್ ಸೃಷ್ಟಿಯಾಗುತ್ತದೆ ಎಂದು ಭಾವಿಸಿರಲಿಲ್ಲ. ಒಟ್ಟಾರೆ ನಾನು ಅಂದುಕೊಂಡಿದ್ದೇ ಬೇರೆ, ನನ್ನ ಕೈ ಹಿಡಿದಿದ್ದೇ ಬೇರೆ.

◆ **ನಟನೆಯ ತಾಲೀಮನ್ನು ಹೇಗೆ ಮಾಡಿದಿರಿ?**

ನಟನೆಯನ್ನು ನಾನು ದಿಢೀರೆಂದು ಕಲಿತಿಲ್ಲ. ಒಂದು ಅವಕಾಶಕ್ಕೆ ಸುಮಾರು 20 ಆಡಿಷನ್ ನೀಡಿರಬಹುದು. ಆ ಎಲ್ಲ ಆಡಿಷನ್ನಿನಲ್ಲೂ ತಪ್ಪು ಮಾಡಿದ್ದೇನೆ, ತೊದಲಿದ್ದೇನೆ. ಆಡಿಷನ್ ನೀಡುತ್ತಲೇ ನಟನೆ ರೂಢಿಸಿಕೊಂಡೆ. ಒಬ್ಬೊಬ್ಬ ನಿರ್ದೇಶಕರು ಒಂದೊಂದು ರೀತಿಯಲ್ಲಿ ಕಲಿಯಲು ಟಿಪ್ಸ್ ಕೊಟ್ಟಿದ್ದಾರೆ. ಫೋಟೋಜೆನಿಕ್ ಫೇಸ್ ಇದೆ ಎನ್ನುವ ಪ್ರಶಂಸೆಯ ಮಾತುಗಳು ನನ್ನ ಕಲಿಕೆಗೆ ಹುರಿದುಂಬಿಸಿವೆ. ನನ್ನ ಭಾಷೆ ಕೂಡ ಸ್ವಚ್ಛವಾಗಿತ್ತು. ಈಗ ನಟನೆಯನ್ನು ಕಲಿಯುತ್ತಿದ್ದೇನೆ. ವಿಶ್ವಾಸದಿಂದಲೇ ನನ್ನ ಕೆಲಸವನ್ನು ಮಾಡುತ್ತಿದ್ದೇನೆ.

◆ **ಬಣ್ಣದ ಲೋಕದಲ್ಲಿ ಹೊಂದಿಕೆ ಆಗಬಲ್ಲೆ ಎನ್ನುವ ಭರವಸೆ ಇತ್ತಾ?**

ಊರು ಬಿಟ್ಟು ಊರಿಗೆ ಬಂದಿದ್ದೇನೆ. ನನ್ನ ಕುಟುಂಬ ವರ್ಗದ ಬೆಂಬಲ ದೊಡ್ಡ ಮಟ್ಟಕ್ಕೆ ಸಿಕ್ಕಿದೆ. ನನ್ನ ಅಪ್ಪ ವೆಂಕಟೇಶ ಉಪ್ಪಾರ ಸರ್ಕಾರಿ ಉದ್ಯೋಗಿ, ಅಮ್ಮ ನರ್ಸಿಂಗ್ ಅಧಿಕಾರಿ. ಹವ್ಯಾಸದಿಂದ ಅಪ್ಪ ಕಥೆಗಾರರು, ಅಮ್ಮ ಫೋಕ್ ಡ್ಯಾನ್ಸರ್, ಅಣ್ಣ ಹರ್ಷ ಉಪ್ಪಾರ ಹಿನ್ನೆಲೆ ಗಾಯಕ. ಕುಟುಂಬದಲ್ಲಿ ಕಲೆಯ ಅಭಿರುಚಿ ಇರುವುದರಿಂದ ನನಗೆ ಪ್ರೋತ್ಸಾಹ ಸಿಕ್ಕಿದೆ. ಅಮ್ಮ ನನಗೆ ಬೆನ್ನೆಲುಬಾಗಿ ನಿಂತಿದ್ದಾರೆ. ನಾನು ಓದಿದ್ದೇ ಬೇರೆ, ಮಾಡುತ್ತಿರುವ ಕೆಲಸವೇ ಬೇರೆ. ಹೀಗಿರುವಾಗ ಹಿಂದೆ ಮುಂದೆ ನೋಡದೆ ನನ್ನ ಮೇಲೆ ಭರವಸೆ ಇಟ್ಟು ನಟಿಸಲು ಹರಸಿದರು.

ಬೆಂಗಳೂರು ಅಷ್ಟಾಗಿ ಗೊತ್ತಿರಲಿಲ್ಲ. ಆಡಿಷನ್ ದೂರದ ಸ್ಥಳದಲ್ಲಿ ಇರ್ತಾ ಇದ್ದವು. ನಾನೊಬ್ಬಳೇ ಹೋಗಬೇಕಿತ್ತು. ಕೆಲವೊಮ್ಮೆ ಊಟ ಸಿಗದೆ ಒದ್ದಾಡುತ್ತಿದ್ದೆ. ಒಂದು ಪಾತ್ರಕ್ಕೆ ನಟಿ ಆಯ್ಕೆ ಆಗಿದ್ದರೂ ಅದೇ ಪಾತ್ರಕ್ಕೆ ಆಡಿಷನ್ ಮಾಡುವ ರಾಜಕಾರಣವನ್ನೂ ಕಂಡಿದ್ದೇನೆ. ಆಯ್ಕೆ ಮಾಡಿದ್ದೀವಿ, ನಾಳೆ ಚಿತ್ರೀಕರಣ ಬನ್ನಿ ಎಂದು ಹೇಳಿ ಮರುದಿನ ಫೋನ್ ಕೂಡ ತೆಗೆದು ಮಾತನಾಡದ ಸಂದರ್ಭಗಳನ್ನೂ ನೋಡಿದ್ದೇನೆ. ಇಂತಹ ಸವಾಲುಗಳನ್ನು ಎದುರಿಸುತ್ತಲೇ ಮುನ್ನುಗ್ಗಿದ್ದೇನೆ. 'ಇಲ್ಲಿಂದ ಹೊರ ಹೋದರೆ ಮಾತ್ರ ಸೋಲು, ಪ್ರಯತ್ನ ಮಾಡುತ್ತಿದ್ದರೆ ಅದು ಸೋಲಲ್ಲ' ಎಂದು ನಮ್ಮ ಅಮ್ಮ ಹೇಳುತ್ತಿದ್ದರು. ಅವರ ಮಾತಿನ ಧೈರ್ಯದಿಂದ ನನ್ನ ಪ್ರಯತ್ನ ಮಾಡಿದ್ದೇನೆ. 'ಗಿಚ್ಚಿ ಗಿಲಿಗಿಲಿ' ರಿಯಾಲಿಟಿ ಶೋ ನನ್ನ ಅದೃಷ್ಟವನ್ನೇ ಬದಲಿಸಿತು.

◆ **ಬರಹವನ್ನು ಮಿಸ್ ಮಾಡಿಕೊಂಡೆ ಎಂದು ಅನ್ನಿಸಿದೆಯಾ?**

ಕೆಲವು ಸೂಕ್ಷ್ಮ ವಿಚಾರಗಳು ಘಟಿಸಿದಾಗ ಅದಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡುವುದು ನನಗೆ ಇಷ್ಟದ ಕೆಲಸ. ನಾನು ಪತ್ರಕರ್ತೆ ಆಗಿ ಅಂತಹ ವಿಷಯಕ್ಕೆ ಸಂಬಂಧಿಸಿ ಸಾಕಷ್ಟು ಬರೆಯಬಹುದಿತ್ತು. ಅದಕ್ಕೀಗ ಸ್ವಲ್ಪ ಕೊರತೆ ಎಂದು ಅನ್ನಿಸುತ್ತಿದೆ. ಮುಂದೆ ಅದೂ ಕೈಗೂಡಬಹುದು. ಯಾವುದೂ ಶಾಶ್ವತ ಅಲ್ಲ. ಯಾವಾಗಲೂ ಪತ್ರಿಕೋದ್ಯಮ ನನ್ನ ಪಾಲಿಗೆ ಇದ್ದೇ ಇರುತ್ತದೆ ಎಂದು ಭಾವಿಸಿದ್ದೇನೆ.

◆ **ಸಿನಿಮಾ ಪ್ರಾಜೆಕ್ಟ್‌ಗಳ ಬಗ್ಗೆ ಹೇಳಿ**

ಪ್ರಥಮ್ ಅವರ ಜೊತೆ ಒಂದು ಸಿನಿಮಾ ಮಾಡುತ್ತಿದ್ದೇನೆ. ಚಿತ್ರೀಕರಣ ಆಗಬೇಕು. ಮತ್ತೊಂದು ಸಿನಿಮಾದಲ್ಲಿ ಮುಖ್ಯಪಾತ್ರ ನಿರ್ವಹಿಸುತ್ತಿದ್ದೇನೆ. ಇದರ ಜೊತೆ ಇನ್ನೆರಡು ಸಿನಿಮಾಗಳು ಮಾತುಕತೆಯ ಅಂತಿಮ ಹಂತದಲ್ಲಿವೆ. 'ಗೌರಿಪುರದ ಗಯ್ಯಾಳಿಗಳು' ಧಾರಾವಾಹಿಯಲ್ಲಿ ಪ್ರಧಾನ ಪಾತ್ರ ಮಾಡಿದ್ದೆ. ಭಾಗ್ಯಲಕ್ಷ್ಮೀಯಲ್ಲಿ ನೆಗೆಟಿವ್ ಪಾತ್ರವನ್ನು ಮಾಡುತ್ತಿದ್ದೇನೆ. ಎಲ್ಲ ಪಾತ್ರಗಳಲ್ಲೂ ಅದರದ್ದೇ ಆದ ಸವಾಲುಗಳು ಇರುತ್ತವೆ. ಎಲ್ಲ ಪಾತ್ರಗಳಿಗೂ ಅದರದ್ದೇ ಆದ ಶೇಡ್ ಕೂಡ ಇರುತ್ತದೆ. 'ಗೌರಿಪುರ...'ದಲ್ಲಿ ಹಾಸ್ಯವಾದರೆ, ಇಲ್ಲಿ ಸಂಪೂರ್ಣ ದ್ವೇಷವನ್ನು ಸಾಧಿಸುವ ಪಾತ್ರ. ಯಾವುದೂ ಸುಲಭ ಅಲ್ಲ.

■ **ರಾಘವೇಂದ್ರ ಕೆ.**